## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 173 |
| 2 | ಸದಸ್ಯರ ಹೆಸರು | : | ಶ್ರೀ ಪಿ.ಆರ್.ರಮೇಶ್ |
| 3 | ಉತ್ತರಿಸುವ ದಿನಾಂಕ | : | 10-07-2018 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ 5 ವರ್ಷಗಳಲ್ಲಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ OFC, Telephone, Cable TV and Internet ವಿದ್ಯುತ್ ತಂತಿ ಮುಂತಾದ ಕೇಬಲ್‌ಗಳು ಅಪಾಯದ ಸ್ಥಿತಿಯಲ್ಲಿ ಪಾದಚಾರಿ/ರಸ್ತೆಯ ಮೇಲೆ ಬಿದ್ದಿರುವ ಪ್ರಕರಣಗಳು ಸರ್ಕಾರ/ಪಾಲಿಕೆಯ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ವಿವರವಾದ ಮಾಹಿತಿಯನ್ನು ದಾಖಲಾತಿಗಳೊಂದಿಗೆ ನೀಡುವುದು | ಬಂದಿದೆ.<br><br>ಬೃಹತ್ ಬೆಂಗಳೂರು ಪಾಲಿಕೆಯ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳಲ್ಲಿ ಅಪಾಯಕಾರಿ ಸ್ಥಿತಿಯಲ್ಲಿರುವ OFC ಕೇಬಲ್‌ಗಳನ್ನು ಆಗಿಂದಾಗ್ಗೆ ತೆರವುಗೊಳಿಸಲಾಗುತ್ತಿದೆ ಹಾಗೂ ನಿರಂತರವಾಗಿ ತೆರವುಗೊಳಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.<br><br>**ಒಳಾಡಳಿತ ಇಲಾಖೆಯ ವತಿಯಿಂದ:**<br><br>2016ನೇ ಸಾಲಿನಲ್ಲಿ ದಿನಾಂಕ: 14-12-2016 ರಂದು 13.00 ಗಂಟೆಯಲ್ಲಿ ಶ್ರೀ ಶಾಂತಾರಾಮ್ ಬಿನ್ ಜಗನ್ನಾಥ್, 49 ವರ್ಷ, ವಾಸ ನಂ.354, 10ನೇ ಮೈನ್ ರಸ್ತೆ, ವೈಯಾಲಿಕಾವಲ್, ಮಲ್ಲೇಶ್ವರಂ, ಬೆಂಗಳೂರು ರವರು ತಮ್ಮ ಮೋಟಾರು ಸೈಕಲ್ ನಂ. ಕೆಎ-04/ಹೆಚ್‌ವೈ. 0731 ನಲ್ಲಿ ಮಲ್ಲೇಶ್ವರಂ 8ನೇ ಮುಖ್ಯರಸ್ತೆಯಲ್ಲಿ 12ನೇ ಅಡ್ಡ ರಸ್ತೆಯಲ್ಲಿ ಪ್ಲೇಹೋಂ ಬಿಲ್ಡಿಂಗ್ ಬಳಿ ಪೂರ್ವದಿಂದ ಪಶ್ಚಿಮಕ್ಕೆ ಹೋಗುತ್ತಿರುವಾಗ ರಸ್ತೆಯಲ್ಲಿ ಅಡ್ಡಲಾಗಿ ನೇತಾಡುತ್ತಿದ್ದ ಕೇಬಲ್ ವೈರ್ ಶಾಂತಾರಾಮ್ ರವರ ಕುತ್ತಿಗೆಗೆ ಸುತ್ತಿಕೊಂಡು ಕೆಳಗೆ ಬಿದ್ದ ಪರಿಣಾಮ, ಕುತ್ತಿಗೆ ಹಾಗೂ ಎಡಗಾಲಿಗೆ ರಕ್ತಗಾಯವಾಗಿರುತ್ತದೆ. ಅಪಘಾತದ ನಂತರ ಮಲ್ಲೇಶ್ವರಂ ಮಣಿಪಾಲ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು, ಹೆಚ್ಚಿನ ಚಿಕಿತ್ಸೆಗಾಗಿ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದಿದ್ದು, ಈ ಘಟನೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಕೇಬಲ್ ವೈರ್ ವ್ಯವಸ್ಥಾಪಕರು ನಿರ್ಲಕ್ಷತೆಯಿಂದ ಸಾರ್ವಜನಿಕ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯುಂಟು ಮಾಡಿದ್ದು ಅವರ ಮೇಲೆ ಕಾನೂನು ರೀತಿ ಕ್ರಮ ಜರುಗಿಸಲು ಕೊಟ್ಟಂತಹ ದೂರು ಮೇರೆಗೆ ಮಲ್ಲೇಶ್ವರಂ ಸಂಚಾರ ಪೊಲೀಸ್ ಠಾಣೆಯಲ್ಲಿ ಮೊ.ಸಂ. 36/2016 ಕಲಂ 337 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು **ಅನುಬಂಧ**ದಲ್ಲಿ ನೀಡಿದೆ. |

<table>
<tr>
<td></td>
<td></td>
<td>
ಇಂಧನ ಇಲಾಖೆಯ ವತಿಯಿಂದ:<br>
ಕಳೆದ 5 ವರ್ಷಗಳಲ್ಲಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ವಿದ್ಯುತ್ ತಂತಿಯು ಅಪಾಯದ ಸ್ಥಿತಿಯಲ್ಲಿ ಪಾದಚಾರಿ/ರಸ್ತೆಯ ಮೇಲೆ ಬಿದ್ದಿರುವ ಪ್ರಕರಣಗಳು ಇಲಾಖೆಯ ಗಮನಕ್ಕೆ ಬಂದಿದ್ದು, ಬೆಂಗಳೂರು ವಿದ್ಯುತ್ ಕಂಪನಿಯ 24x7 ಸಹಾಯವಾಣಿಗೆ ಗ್ರಾಹಕರಿಂದ ದಾಖಲಾಗಿರುವ ದೂರುಗಳ ವಿವರಗಳು ಕೆಳಕಂಡಂತೆ ಇರುತ್ತವೆ:
<table>
<tr><th>ಕ್ರಸಂ</th><th>ವರ್ಷ</th><th>ದಾಖಲಾದ ದೂರುಗಳ ಸಂಖ್ಯೆ</th></tr>
<tr><td>1</td><td>2013–14</td><td>302</td></tr>
<tr><td>2</td><td>2014–15</td><td>256</td></tr>
<tr><td>3</td><td>2015–16</td><td>216</td></tr>
<tr><td>4</td><td>2016–17</td><td>235</td></tr>
<tr><td>5</td><td>2017–18</td><td>198</td></tr>
<tr><td>6</td><td>2018–19 (ಜೂನ್2018ರ ಅಂತ್ಯಕ್ಕೆ)</td><td>53</td></tr>
<tr><td colspan="2">ಒಟ್ಟು</td><td>1260</td></tr>
</table>
</td>
</tr>
<tr>
<td>ಆ</td>
<td>ಪಾದಚಾರಿ ಮಾರ್ಗ/ರಸ್ತೆಗಳ ಮೇಲೆ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾಲಕರಿಗೆ ಅಡಚಣೆ ಮಾಡುತ್ತಿರುವ ಕೇಬಲ್‌ಗಳ ವಾರಸುದಾರರು /ಸಂಬಂಧಿಸಿದ ಸಂಸ್ಥೆಗಳ ಮೇಲೆ ಸರ್ಕಾರ/ಪಾಲಿಕೆ/ ಪೊಲೀಸ್ ಹಾಗೂ ಸರ್ಕಾರದ ಇನ್ನಿತರ ಇಲಾಖೆಗಳಿಂದ ಇಲ್ಲಿಯವರೆವಿಗೂ ಹಾನಿಕಾರಕ/ಅನಾನುಕೂಲಕ್ಕೆ ಸಂಬಂಧಿಸಿದಂತೆ ಎಷ್ಟು ಪ್ರಕರಣಗಳಲ್ಲಿ ಕಾನೂನಿನ ಕ್ರಮ ಕೈಗೊಳ್ಳಲಾಗಿದೆ; ಇದ್ದಲ್ಲಿ ವಿವರವಾದ ಮಾಹಿತಿಯನ್ನು ನೀಡುವುದು?</td>
<td>ಒಳಾಡಳಿತ ಇಲಾಖೆಯ ವತಿಯಿಂದ:<br>
ಮಲ್ಲೇಶ್ವರಂ ಸಂಚಾರ ಪೊಲೀಸ್ ಠಾಣೆಯ ಮೊ.ಸಂ. 636/2016 ಕಲಂ 337 ಐಪಿಸಿ ಪ್ರಕರಣದಲ್ಲಿ ಬಿ.ಎಸ್.ಎನ್.ಎಲ್. ಮುಖ್ಯ ಇಂಜಿನಿಯರ್ ಬಸವರಾಜಪ್ಪ ಮತ್ತು ಸಿಬ್ಬಂದಿಗಳಾದ (1) ಪ್ರಭುಕುಮಾರ್.ವಿ (2) ದಾಸಪ್ಪ ಮತ್ತು (3) ರಂಗರಾಮಯ್ಯ ರವರುಗಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ದಿನಾಂಕ: 04-07-2017 ರಂದು ಸಲ್ಲಿಸಿದ್ದು, ಪ್ರಕರಣವು ಘನ 3ನೇ ಎಂ.ಎಂ. ಸಂಚಾರಿ ನ್ಯಾಯಾಲಯದ ಸಿ.ಸಿ. ಸಂಖ್ಯೆ: 2090/17 ರಲ್ಲಿ ವಿಚಾರಣೆಯಲ್ಲಿದ್ದು, ಮುಂದಿನ ವಿಚಾರಣೆ ದಿನಾಂಕ: 01-09-2018 ಆಗಿರುತ್ತದೆ.</td>
</tr>
<tr>
<td>ಇ</td>
<td>ಕಳೆದ 5 ವರ್ಷಗಳಲ್ಲಿ ಈ ರೀತಿಯ ಕೇಬಲ್‌ಗಳಿಂದ ತೊಂದರೆಗೆ ಒಳಗಾಗಿರುವ ಸಾರ್ವಜನಿಕರಿಗೆ/ವಾಹನ ಸವಾರರಿಗೆ ಸರ್ಕಾರ ಅಥವಾ ಪಾಲಿಕೆಯಿಂದ ಯಾವ ಪರಿಹಾರ ನೀಡಲಾಗಿದೆ; ನೀಡಿದ್ದಲ್ಲಿ ಅಪಘಾತ/ಹಾನಿಯಾಗಿರುವ ಪ್ರಕರಣಗಳ ಮಾಹಿತಿಯನ್ನು ನೀಡುವುದು;</td>
<td>ಕೇಬಲ್ ಹಾನಿಯಿಂದ 2016ನೇ ಸಾಲಿನಲ್ಲಿ ಮಲ್ಲೇಶ್ವರಂ ಸಂಚಾರ ಪೊಲೀಸ್ ಠಾಣೆಯಲ್ಲಿ ಮೇಲ್ಕಂಡಂತೆ ದಾಖಲಾಗಿರುವ ಪ್ರಕರಣವು ಪ್ರಸ್ತುತ ಘನ 3ನೇ ಎ.ಸಿ.ಎಂ.ಎಂ. ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ.</td>
</tr>
</table>

| | | |
|---|---|---|
| ಈ | ಕಳೆದ 5 ವರ್ಷಗಳಲ್ಲಿ ಪಾಲಿಕೆ ಹಾಗೂ ಖಾಸಗಿ ಸಂಸ್ಥೆಗಳ ನಿರ್ಲಕ್ಷ್ಯಕ್ಕೆ ಒಳಗಾಗಿ ಸಂಬಂಧಿಸಿದ ಪ್ರಕರಣಗಳೆಷ್ಟು; ಎಷ್ಟು ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಕೇಬಲ್ ಹಾನಿಯಿಂದ 2016ನೇ ಸಾಲಿನಲ್ಲಿ ಮಲ್ಲೇಶ್ವರಂ ಸಂಚಾರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ: 636/2016 ಕಲಂ 337 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣವು ಮಾನ್ಯ 3ನೇ ಎಂ.ಎಂ. ಸಂಚಾರಿ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು, ಇದುವರೆಗೆ ಪೊಲೀಸ್ ಇಲಾಖೆಯಿಂದಾಗಲಿ, ಬೆಸ್ಕಾಂನಿಂದಾಗಲಿ ಮತ್ತು ಬಿಬಿಎಂಪಿಯಿಂದಾಗಲಿ ಯಾವುದೇ ಪರಿಹಾರ ನೀಡಿರುವುದಿಲ್ಲ. |

ಸಂಖ್ಯೆ: ನಅಇ 315 ಎಂಎನ್‌ಯು 2018

(ಡಾ|| ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

ಪ್ರ.ದಾಖ. 173ರ

ಎ.ಪ್ರ. ಪತ್ರಗಳ ಅನುಬಂಧ

8

ಕರ್ನಾಟಕ ರಾಜ್ಯ ಪೊಲೀಸ್

## ಪ್ರಥಮ ವರ್ತಮಾನ ವರದಿ

(ದಂಡಪ್ರಕ್ರಿಯ ಸಂಹಿತೆ ಕಲಂ 154 ರ ಕೆಳಗೆ)

ಘನ ನ್ಯಾಯಾಲಯ : Metropolitan Magistrate (Traffic Court -3),Nrupatunga Road,Bangalore City

1. ಜಿಲ್ಲೆ : Bengaluru city ವೃತ್ತ/ಉಪ ವಿಭಾಗ : North Traffic Sub-Division ಪೊಲೀಸ್ ಠಾಣೆ : Malleshwaram Traffic PS
   ಅಪರಾಧ ಸಂಖ್ಯೆ : 0636/2016 ಪ್ರ.ವ.ವ.ದಿನಾಂಕ : 14/12/2016

2. ಕಾಯ್ದೆ ಮತ್ತು ಕಲಂಗಳು : IPC 1860 (U/s-337)

3. (a) ಕೃತ್ಯ ನಡೆದ ದಿನ : Wednesday ದಿನಾಂಕ ದಿಂದ : 14/12/2016 ದಿನಾಂಕ ವರೆಗೆ : 14/12/2016
   ವೇಳೆಯಿಂದ : 13:00:00 ವೇಳೆಯವರೆಗೆ : 13:01:00
   (b) ಠಾಣೆಯಲ್ಲಿ ವರ್ತಮಾನ ಸ್ವೀಕರಿಸಿದ ದಿನಾಂಕ : 14/12/2016 20:30:00 ಬರವಣಿಗೆಯಲ್ಲಿ / ಹೇಳಿಕೆ : Oral
   (c) ಪಿರ್ಯಾದುದಾರ / ಬಾತ್ಮೀದಾರ ತಡವಾಗಿ ವರದಿ ಮಾಡಿದಕ್ಕೆ ಕಾರಣಗಳು :
   NA
   (d) ಜನರಲ್ ಡೈರಿ ಉಲ್ಲೇಖ ಸಂಖ್ಯೆ ಮತ್ತು ಸಮಯ : 1 , 20:30:00

4. (a) ಕೃತ್ಯ ನಡೆದ ಸ್ಥಳ :
   8 th main 12 th Cross near Play home bulding, Malleshwaram, Bengaluru city, Karnataka, 560003
   (b) ಪೊಲೀಸ್ ಠಾಣೆ ಯಿಂದ ಇರುವ ದಿಕ್ಕು ಮತ್ತು ದೂರ : towards North 2 KM
   (c) ಗ್ರಾಮ : MALLESHWARAM ಗಸ್ತಿನ ಹೆಸರು : Malleshwaram
   (d) ಸ್ಥಳವು ಬೇರೆ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವಂತಹದ್ದು ಆದರೆ ಆ ಪೊಲೀಸ್ ಠಾಣೆಯ ಹೆಸರು :
   ಜಿಲ್ಲೆ :

5. ಪಿರ್ಯಾದುದಾರ/ಬಾತ್ಮೀದಾರ :
   (a) ಹೆಸರು : Sri. Shantharam ತಂದೆ / ಗಂಡನ ಹೆಸರು : Jagannath
   (b) ವಯಸ್ಸು : 49 (c) ವೃತ್ತಿ : Tailor
   (d) ಧರ್ಮ : (e) ಜಾತಿ ..........................
   (f) ಫ್ಯಾಕ್ಸ್ : (g) ಇ-ಮೇಲ್ :
   (h) ದೂರವಾಣಿ : 9880767053 (i) ರಾಷ್ಟ್ರೀಯತೆ : India
   (j) ಪಾಸ್ ಪೋರ್ಟ್ ಸಂಖ್ಯೆ : ನೀಡಿದ ದಿನಾಂಕ :

(k) ವಿಳಾಸ : NO: 354, 10 th Main road, Vyyalikaval,Malleshwarm , Bengaluru city , Karnataka-560003

(l) ಲಿಂಗ : Male

(m) ಪಿರ್ಯಾದುದಾರ ಖುದ್ದಾಗಿ ನೋಡಿದ್ದರೆ ಅಥವಾ ಕೇಳಿಸಿಕೊಂಡಿದ್ದರೆ
ಪಿರ್ಯಾದುದಾರರು ಕೃತ್ಯವನ್ನು ನೋಡಿದ್ದಾರೆ

6. ಗೊತ್ತಿರುವ / ಅನುಮಾನಿತ/ಅಪರಿಚಿತ ವ್ಯಕ್ತಿಯ ಪೂರ್ತಿ ವಿವರಗಳು

| Sl.No. | ಹೆಸರು / ತಂದೆಯ ಹೆಸರು / ಜಾತಿ / ವಿಳಾಸ | ವಿಧ | ವ್ಯಕ್ತಿಯ ವಿಧ | ಲಿಂಗ | ವಯಸ್ಸು | ವೃತ್ತಿ |
|---|---|---|---|---|---|---|
| 1 | Manager unknown network Cable(A1) ,NABengaluru city, Karnataka | Accused | Common man | Male | | |

7. ನೊಂದವರ ವಿವರಗಳು

| SL No | ಹೆಸರು | ವಿಳಾಸ | ಗಾಯದ ವಿಧ | ಲಿಂಗ | ವಯಸ್ಸು | ವೃತ್ತಿ |
|---|---|---|---|---|---|---|
| 1 | Shantharam | NO: 354, 10 th main Vyyalikaval, Malleshwaram Bengaluru city Karnataka-560003 | Minor | Male | 49 years | Tailor |

8. ಕಳುವಾಗಿರುವ / ಬಾಗಿಯಾಗಿರುವ ಸ್ವತ್ತುಗಳ ವಿವರಗಳು

| Sl.No | Property Type | Item description | Estimated Value (in Rs.) |
|---|---|---|---|
| 1 | | | |

ಕಳುವಾಗಿರುವ / ಬಾಗಿಯಾಗಿರುವ ಸ್ವತ್ತುಗಳ ಮೌಲ್ಯ :

9. ಪಂಚನಾಮ ವರದಿ / ಯು.ಡಿ. ಕೇಸ್. ಸಂಖ್ಯೆ :

10. ಪ್ರಥಮ ವರ್ತಮಾನ ವರದಿಯ ವಿವರಗಳು

ಈ ಕೇಸಿನ ಸಂಕ್ಷಿಪ್ತ ಸಾರಾಂಶವೇನೆಂದರೆ ದಿನಾಂಕ: 14/12/2016 ರಂದು 13-00 ಗಂಟೆಯಲ್ಲಿ ಈ ಕೇಸಿನ ಪಿರ್ಯಾದಿಯವರು ತಮ್ಮ ಮೋಟಾರ್ ಸ್ಕೂಟರ್ ( Honda active ) ನಂ: KA-04-HY-0731 ವಾಹನವನ್ನು ಮಲ್ಲೇಶ್ವರಂ 8 ನೇ ಮುಖ್ಯರಸ್ತೆಯಲ್ಲಿ 12 ನೇ ಅಡ್ಡರಸ್ತೆಯಲ್ಲಿ ವ್ಯೋಮ ಹೋಟೆಲ್ ಬಿಲ್ಡಿಂಗ್ ಬಳಿ, ಪೂರ್ವದಿಂದ ಪಶ್ಚಿಮದ ಕಡೆಗೆ ಸವಾರಿ ಮಾಡಿಕೊಂಡು ಹೋಗುತ್ತಿರುವಾಗ, ರಸ್ತೆಯಲ್ಲಿ ಅಡ್ಡಲಾಗಿ ನೇತಾಡುತ್ತಿದ್ದ ಕೇಬಲ್ ವೈರ್ ಮೋಟಾರ್ ಸೈಕಲ್ ಸವಾರ ಪಿರ್ಯಾದಿಯವರ ಕುತ್ತಿಗೆಗೆ ಸುತ್ತಿಕೊಂಡು ಕೆಳಗೆ ಬಿದ್ದ ಪರಿಣಾಮ, ಕುತ್ತಿಗೆ ಹಾಗು ಎಡಗಾಲಿಗೆ ರಕ್ತಗಾಯವಾಗಿರುತ್ತದೆ. ತಕ್ಷಣ ನಂತರ ಮಲ್ಲೇಶ್ವರಂ ಮಣಿಪಾಲ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದು, ಈ ಘಟನೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಕೇಬಲ್ ವೈರ್ ವ್ಯವಸ್ಥಾಪಕರು ನಿರ್ಲಕ್ಷತೆಯಿಂದ ಸಾರ್ವಜನಿಕ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯುಂಟು ಮಾಡಿದ್ದು ಅವರ ಮೇಲೆ ಕಾನೂನು ರೀತಿಯ ಕ್ರಮ ಜರುಗಿಸಲು ಕೊಟ್ಟ ದೂರು ಇತ್ಯಾದಿ. 13° 0'9.08"N-- 77°33'55.68"E

11. (a) ತೆಗೆದುಕೊಂಡ ಕ್ರಮ:

Investigation

(b) ಪ್ರ.ವ.ವರದಿಯನ್ನು ಪಿರ್ಯಾದಿಯವರಿಗೆ ಅವರದೆ ಭಾಷೆಯಲ್ಲಿ ವಿವರಿಸಿ, ಓದಿ ಹೇಳಲಾಗಿದೆ ಅದರ ಪ್ರತಿಯನ್ನು ಪುಕಟ್ಟೆಯಾಗಿ ಕೊಡಲಾಗಿದೆ? : Yes

(c) ಪೊಲೀಸ್ ಅಧಿಕಾರಿಯು ತನಿಖೆಗೆ ಸ್ಥಳಕ್ಕೆ ಧಾವಿಸದಿದ್ದಲ್ಲಿ ಅಥವಾ ತನಿಖೆ ಮಾಡಲು ನಿರಾಕರಿಸಿದಲ್ಲಿ ಕಲಂ 157 ಸಿ.ಆರ್.ಪಿ.ಸಿ ಯ ಕಲಂ (ಎ)ಅಥವಾ (ಬಿ)ಯಡಿ ಕಾರಣವನ್ನು ದಾಖಲಿಸಬೇಕು.

Proceed Investiagation

12. ಪಿರ್ಯಾದಿಯ ಸಹಿ/ ಹೆಬ್ಬೆರಳಿನ ಗುರುತು

13. ನ್ಯಾಯಾಲಯಕ್ಕೆ ಕಳುಹಿಸಿದ ದಿನಾಂಕ ಮತ್ತು ಸಮಯ : 15/12/2016 09:00:00

14. ನ್ಯಾಯಾಲಯಕ್ಕೆ ತೆಗೆದುಕೊಂಡು ಹೋದ ಪಿಸಿ/ ಹೆಚ್.ಸಿ : LAKSHMINARASHIMAH MU , HC 6849

ಓದಿ ಹೇಳಲಾಗಿ ಕೇಳಲಾಗಿ ಸರಿಯಾದೆ

ಠಾಣಾಧಿಕಾರಿಯ ಸಹಿ

ಮಲ್ಲೇಶ್ವರಂ ಸಂಚಾರ ಪೊಲೀಸ್ ಠಾಣೆ
ಬೆಂಗಳೂರು-560 003

ಹೆಸರು: NATARAJ K V - HC 5457

ಪ್ರತಿಗಳು : Superintendent of Police/Commissioner of Police